ಸಿ.ಸಿ .ನಂ. 191/2022 ಪಿಡಬ್ಲೂಃ 1

ದಿನಾಂಕಃ 25-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

4. ಸಾಲದ ಅರ್ಜಿಗಳಲ್ಲಿ ಬೇರೆ ಬೇರೆ ಸಾಲಕ್ಕೆ ಬೇರೆ ಬೇರೆ ಅರ್ಜಿಯ ನಮೂನೆಗಳು ಇರುತ್ತವೆ ಎಂದರೆ ಸರಿ . ಈ ಪ್ರಕರಣದ ಸಾಲ ಸಂಘದ ಸಾಲವಾಗಿರುತ್ತದೆ. ಸಾಲದ ಅರ್ಜಿಯಲ್ಲಿ ಎಲ್ಲಾ ಸಂಗತಿಗಳನ್ನು ಸರಿಯಾಗಿ ಭರ್ತಿ ಮಾಡಿದರೆ ಮಾತ್ರ ನಾವು ಅದನ್ನು ಆಡಳಿತ ಮಂಡಳಿಯಲ್ಲಿ ಇಡುತ್ತೇವೆ ಎಂದರೆ ಸರಿ . ಎಷ್ಟು ಮೊತ್ತದ ಸಾಲವನ್ನು ಕೇಳುತ್ತಿದ್ದಾರೆ ಅದನ್ನು ನಿಖರವಾಗಿ ಸಾಲದ ಅರ್ಜಿಯಲ್ಲಿ ನಮೂದಿಸಬೇಕು ಎಂದರೆ ಸರಿ . ಎಷ್ಟು ಮೊತ್ತದ ಸಾಲ ಎಂದು ನಿಖರವಾಗಿ ನಮೂದಿಸದೇ ಇದ್ದರೆ ಆ ಅರ್ಜಿಯನ್ನು ಆಡಳಿತ ಮಂಡಳಿ ಸಭೆಯ ಮುಂದೆ ಇಡುವುದಿಲ್ಲ ಎಂದರೆ ಸರಿಯಲ್ಲ . ಮಿಟಿಂಗ್ ನಲ್ಲಿ ಮಾತಿನ ಮುಖಾಂತರ ಸಂಘದ ಅಧ್ಯಕ್ಷರು ಶಿಲ್ಪಾ ರವೀಂದ್ರ ತಾಂಡೇಲ್, ಉಪಾಧ್ಯಕ್ಷರು ಲಕ್ಷ್ಮೀ ಶೇಷು ತಾಂಡೇಲ, ಉಮಾ ದತ್ತಾ ಕುಮಟಾಕರ ಮೌಖಿಕವಾಗಿ ಎಷ್ಟು ಸಾಲ ಬೇಕು ಹೇಳಿರುತ್ತಾರೆ . ಮಿಟಿಂಗ್ ನಲ್ಲಿ ಹಾಜರಿದ್ದ ಸದಸ್ಯರುಗಳ ಸಹಿಗಳನ್ನು ಪಡೆದುಕೊಳ್ಳುತ್ತಾರೆ ಎಂದರೆ ಸರಿ . ಠರಾವಿನಲ್ಲಿ ಮೂವರು ಹಾಜರಿದ್ದ ಬಗ್ಗೆ ಸಹಿಗಳನ್ನು ಪಡೆದುಕೊಳ್ಳಬೇಕಾಗುತ್ತದೆ ಎಂದರೆ ಮಾಹಿತಿ ಇಲ್ಲ . ಮಿಟಿಂಗ್ ನಲ್ಲಿ ಮೂವರು ಹಾಜರಿದ್ದರು ಎಂದು ಸಾಲದ ಅರ್ಜಿಯನ್ನು ನೋಡಿ ಹೇಳುತ್ತಿದ್ದೇನೆ . ಸಾಲದ ಅರ್ಜಿಯನ್ನು ನೋಡಿ ಮಿಟಿಂಗ್ ನ ಸಂದರ್ಭದಲ್ಲಿ ಅವರು ಹಾಜರಿದ್ದರು ಎಂದು ಹೇಳುತ್ತಿದ್ದೇನೆ . ಒಂದುವೇಳೆ ಆ ರೀತಿ ಬಂದು ಹೇಳಿದ್ದರೆ ಇಂತಿಂತ ವ್ಯಕ್ತಿಗಳು ಖುದ್ದಾಗಿ ಬಂದು 3,75,000/- ಸಾಲ ಕೇಳಿದ್ದಾರೆ ಎಂದು ಠರಾವಿನಲ್ಲಿ ನಮೂದು ಮಾಡುತ್ತಾರೆ ಎಂದರೆ ಸರಿ . ಸಾಲದ ಅರ್ಜಿಯಲ್ಲಿ ಹಣವನ್ನೇ ನಮೂದು ಮಾಡದೇ ಇದ್ದಲ್ಲಿ ಅಂತಹ ಅರ್ಜಿಯನ್ನು ಮುಖ್ಯ ಕಾರ್ಯನಿರ್ವಾಹಕರು ಆಡಳಿತ ಮಂಡಳಿಯ ಮುಂದೆ ಇಡುತ್ತಾರೆ . ಈ

ಅರ್ಜಿಯನ್ನು ಮುಖ್ಯ ಕಾರ್ಯನಿರ್ವಹಕರಾದ ಪವಿತ್ರಾ ನಾಗರಾಜ ಆಚಾರ್ಯಯ ರವರು ಆಡಳಿತ ಮಂಡಳಿಯ ಮುಂದೆ ಇಟ್ಟಿರುತ್ತಾರೆ. ನಾನು ಅವರ ಜೊತೆಗೆ ಮಾತನಾಡಿ ಈ ವಿಷಯ ತಿಳಿದುಕೊಂಡಿಲ್ಲ . ಅವರು ಬಂದು ಹೇಳಿದರು ಎಂದು ನಮೂದಾದ ಠರಾವನ್ನು ನಾನು ನೋಡಿಲ್ಲ. ನಾನು ಅವರನ್ನು ಕೇಳಿ ತಿಳಿದುಕೊಂಡಿರುತ್ತೇನೆ. ಈಗ ಇರುವ ಮುಖ್ಯ ಕಾರ್ಯನಿರ್ವಾಹಕರನ್ನು ಕೇಳಿ ತಿಳಿದುಕೊಂಡಿರುತ್ತೇನೆ . ಈಗ ಇರುವ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಎಷ್ಟು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ ಸರಿಯಾಗಿ ಮಾಹಿತಿ ಇಲ್ಲ . ಅವರ ಹೆಸರು ರಮ್ಯಾ ಗಣೇಶ ಗಿರಿಯಣ್ಣ . ಸ್ವಸಹಾಯ ಸಂಘ ಸಾಲದ ಅರ್ಜಿಯಲ್ಲಿ ಅದು ಯಾವ ಸಂಘ ಹಾಗೂ ಎಷ್ಟು ಸಾಲವನ್ನು ಕೋರುತ್ತದೆ ಎಂದು ನಮೂದಿಸಲು ಒಂದು ಕಾಲಂ ಇರುತ್ತದೆ ಎಂದರೆ ಸರಿ . ಅರ್ಜಿಯ ಜೊತೆಗೆ ಯಾವ ಯಾವ ಸದಸ್ಯರಿಗೆ ಎಷ್ಟೆಷ್ಟು ಸಾಲದ ಅಗತ್ಯ ಇದೆ ಯಾದಿಯನ್ನು ಲಗತ್ತಿಸಬೇಕು ಎಂದರೆ ಸರಿ . ಮರು ಪಾವತಿಯ ಬಗ್ಗೆ ನಿಭಂದನೆಗಳನ್ನು ಕೂಡ ನಿಖರವಾಗಿ ಬರೆಯಬೇಕೆಂದು ಇದೆ ಎಂದರೆ ಮಾಹಿತಿ ಇಲ್ಲ . ಮರು ಪಾವತಿ ಯಾವ ರೀತಿ ಮಾಡುತ್ತೇವೆ ಎಂಬುವ ಬಗ್ಗೆ ಕಾಲಂ ನಂ. 3 ರಲ್ಲಿ ಅದನ್ನು ಲಗತ್ತಿಸಬೇಕು ಎಂದು ಇದೆ ಎಂದರೆ ಸರಿ . ಗುಂಪಿನ ಪರವಾಗಿ ಸಾಲವನ್ನು ಕೊಡುವಾಗ ಯಾವ ಯಾವ ಪದಾಧಿಕಾರಿಗಳು ಅಧಿಕಾರವನ್ನು ಕೊಟ್ಟಿದ್ದೇವೆ ಎಂಬ ಬಗ್ಗೆ ಸದಸ್ಯರ ಆಂತರಿಕ ಪ್ರತಿಯನ್ನು ಲಗತ್ತಿಸಬೇಕು ಎಂದು ಇದೆ ಎಂದರೆ ಸರಿ . ನಮ್ಮ ತಿಳುವಳಿಕೆ ಮತ್ತು ಮಾಹಿತಿ ಪ್ರಕಾರ ಮಾಹಿತಿ ಸರಿಯಾಗಿ ಇದೆ ಎಂದು ಪ್ರಮಾಣ ಪತ್ರ ಕೊಡಬೇಕೆಂದು 5 ನೇ ಕಾಲಂನಲ್ಲಿ ಇದೆ ಎಂದರೆ ಸರಿ . 7 ನೇ ಕಾಲಂನಲ್ಲಿ ಗುಂಪಿನ ಹಣಕಾಸಿನ ಈಗಿನ ಸ್ಥಿತಿಗತಿಯ ಪಟ್ಟಿಯ ವಿವರಗಳ ಯಥಾ ಪ್ರತಿಯನ್ನು ಲಗತ್ತಿಸಬೇಕೆಂದು ಕುಡಾ ಇದೆ ಎಂದರೆ ಮಾಹಿತಿ ಇಲ್ಲ. ಸಾಕ್ಷಿ ಮುಂದುವರೆದು ಹೌದು ಎಂದು ನುಡಿದಿರುತ್ತಾರೆ. ಅಂತಹ ಎಲ್ಲಾ ದಾಖಲಾತಿಗಳನ್ನು ಲಗತ್ತಿಸಿದಾಗ ಮಾತ್ರ ಸಾಲದ ಅರ್ಜಿಯನ್ನು ಆಡಳಿತ ಮಂಡಳಿಯ ಮುಂದೆ ಇಡುತ್ತಾರೆ ಎಂದರೆ ಸಾಕ್ಷಿ ಆಗಿನ ಮುಖ್ಯ ಕಾರ್ಯ ನಿರ್ವಹಕರು ಯಾವ ರೀತಿ ಮೆಂಟೆನ್ ಮಾಡಿದ್ದಾರೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ . ನಮ್ಮ ಬ್ಯಾಂಕಿನಲ್ಲಿ ಮುಖ್ಯ ಕಾರ್ಯ ನಿರ್ವಹಕರು ಅವರವರ ಮನಸ್ಸಿಗೆ ಬಂದಂತೆ ಕಾರ್ಯ ನಿರ್ವಹಿಸುತ್ತಾರೆ ಅಥವಾ ನಮ್ಮ ಬ್ಯಾಂಕಿನ

ನಿಬಂಧನೆಗಳ ಪ್ರಕಾರ ಕಾರ್ಯ ನಿರ್ವಹಿಸುತ್ತಾರೋ ಎಂದರೆ ಸಾಕ್ಷಿ ಬ್ಯಾಂಕಿನ ನಿಬಂಧನೆಯ ಪ್ರಕಾರ ಕಾರ್ಯ ನಿರ್ವಹಿಸುತ್ತಾರೆ ಎಂದು ನುಡಿದಿರುತ್ತಾರೆ . ನಿಬಂಧನೆಯ ಪ್ರಕಾರ ಸಾಲದ ಅರ್ಜಿಯಲ್ಲಿ ಹೇಳಿರುವ ಎಲ್ಲಾ ದಾಖಲಾತಿಗಳನ್ನು ಲಗತ್ತಿಸಬೇಕು ಎಂಬುದು ನಮ್ಮ ಬ್ಯಾಂಕಿನ ನಿಬಂಧನೆ ಎಂದರೆ ಸರಿ . ನಮ್ಮ ಪ್ರಕಾರ ಸಾಲದ ಅಗತ್ಯತೆ ಬಗ್ಗೆ ಯಾದಿಯನ್ನು ಪಡೆದುಕೊಂಡಿದ್ದಾರೆಯೋ ಇಲ್ಲವೋ ನನಗೆ ಮಾಹಿತಿ ಇಲ್ಲ. ಮರುಪಾವತಿಯನ್ನು ಯಾವ ರೀತಿ ಎಷ್ಟು ಕಂತುಗಳಲ್ಲಿ ಮರು ಪಾವತಿ ಮಾಡುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಗುಂಪಿನ ಪರವಾಗಿ ಯಾರು ಯಾರಿಗೆ ಸಾಲಕ್ಕಾಗಿ ಅರ್ಜಿಯನ್ನು ಸಲ್ಲಿಸಬಹುದು ಹಾಗೂ ಸಹಿ ಮಾಡಲು ಅಧಿಕಾರ ಕೊಟ್ಟಿದ್ದಾರೆ ಎಂಬ ಠರಾವನ್ನು ಇದರ ಜೊತೆಗೆ ಹಾಜರು ಮಾಡಿದ್ದಾರೆಯೋ ಇಲ್ಲವೋ ಗೊತ್ತಿಲ್ಲ . ಗುಂಪಿನ ಹಣಕಾಸಿನ ಸ್ಥಿತಿಗತಿಯ ಬಗ್ಗೆ ವಿವರ ಪಟ್ಟಿಯನ್ನು ಹಾಜರು ಪಡಿಸಿದ್ದಾರಾ ದಾಖಲಾತಿ ನೋಡಿ ಹೇಳಬೇಕು . ಒಂದು ಸಂಘದ ಆರ್ಥಿಕ ಸ್ಥಿತಿಗತಿಯನ್ನು ನೋಡಿ ಮಾತ್ರ ಸಾಲವನ್ನು ಕೊಡುತ್ತೇವೆ ಎಂದರೆ ಸರಿ . ಸಂಘದ ಆರ್ಥಿಕ ಸ್ಥಿತಿಗತಿಯ ಬಗ್ಗೆ ದಾಖಲಾತಿ ಕೊಟ್ಟಿಲ್ಲ. ಎಷ್ಟು ಸಾಲ ಬೇಕು ಎಂದು ದಾಖಲಾತಿ ಕೊಟ್ಟ ಬಗ್ಗೆ ದಾಖಲಾತಿ ಇದೆಯಾ ಎಂದರೆ ಸಾಕ್ಷಿ ಆಡಳಿತ ಮಂಡಳಿಯ ಸಭೆಯ ಠರಾವಿನಲ್ಲಿ ಇದೆ ಎಂದು ನುಡಿದಿರುತ್ತಾರೆ. ಯಾವ ದಾಖಲಾತಿ ಎಂದು ನಮೂದಾಗಿದೆ ನೋಡಿ ಹೇಳಬೇಕು . ಠರಾವು ದಿ 16-09-2019 ರಂದು ಆಗಿರುತ್ತದೆ . ಸಾಲಕ್ಕಾಗಿ ಅರ್ಜಿ ಬಂದ ದಿನಾಂಕ ನೆನಪಿಲ್ಲ . ಸಾಲದ ಅರ್ಜಿಯ ಜೊತೆಗೆ ಯಾವ ಯಾವ ದಾಖಲಾತಿಗಳನ್ನು ಕೊಡಬೇಕು ಅಂತಹ ದಾಖಲಾತಿಗಳನ್ನು ನಾನು ಈವರೆಗೆ ನೋಡಿಲ್ಲ ಎಂದರೆ ಸರಿ . ನಿಪಿ-7 ಮತ್ತು ನಿಪಿ-14 ಒಂದೇ ದಾಖಲಾತಿ ಎಂದರೆ ಸರಿ . ನಿಪಿ-14 ರಲ್ಲಿ ಸಂಘದ ಹೆಸರು ಇರುವ ಸ್ಥಳದಲ್ಲಿ ಏನು ನಮೂದು ಮಾಡಿಲ್ಲ ಎಂದರೆ ಸರಿ . ಆದರೆ ನಿಪಿ-7 ರಲ್ಲಿ ಶ್ರೀದೇವಿ ಸಂಘ , ಗಂಗೇಕೊಳ್ಳ ಎಂದು ಬರೆಯಲಾಗಿದೆ ಎಂದರೆ ಸರಿ . ನಿಪಿ-7 ರಲ್ಲಿ ಶ್ರೀದೇವಿ ಸಂಘ, ಗಂಗೇಕೊಳ್ಳ ಎಂದು ಬರೆದಿರುವುದು ಹಾಗೂ ಇತರ ಬರವಣಿಗೆಗಳಿಗೆ ವ್ಯತ್ಯಾಸ ಇದೆ ಎಂದರೆ ಗೊತ್ತಿಲ್ಲ .

(ಈ ಹಂತದಲ್ಲಿ ನ್ಯಾಯಾಲಯದ ಅವಧಿ ಮುಗಿದ ಕಾರಣ ಮಧ್ಯಾಹ್ನ 2.45 ಗಂಟೆಗೆ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.

ಸಿ.ಸಿ .ನಂ. 191/2022 ಪಿಡಬ್ಲೂಃ 1

ಸಾಕ್ಷಿಯನ್ನು ಪುನಃ ಮಧ್ಯಾಹ್ನ 2.45 ಗಂಟೆಗೆ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

5. ಆಡಳಿತ ಮಂಡಳಿಯ ಮುಂದೆ ಮೂವರು ಹಾಜರಿದ್ದು ಮೌಖಿಕವಾಗಿ ಕೋರಿಕೊಂಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಆರೋಪಿ ನಮ್ಮ ಸೌಹಾರ್ದದಲ್ಲಿ ಸದಸ್ಯರಿದ್ದರು ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಆಂತರಿಕ ಒಪ್ಪಂದ ಪತ್ರ ಇದೆ ಎಂದು ನುಡಿದಿರುತ್ತಾರೆ . ಸಾಕ್ಷಿ ಕೇಸಿನ ಕಡತದಲ್ಲಿರುವ ನಿಪಿ-11 ತೋರಿಸಿ ಅದು ಆಂತರಿಕ ಒಪ್ಪಂದ ಪತ್ರ ಎಂದು

ನುಡಿದಿರುತ್ತಾರೆ . ಆರೋಪಿ ನಮ್ಮ ಬ್ಯಾಂಕಿನ ಸದಸ್ಯರು ಎಂದು ತೋರಿಸಲು ನಿಪಿ -11 ದಾಖಲಾತಿ ಅಲ್ಲ ಎಂದರೆ ಸರಿ . ಆಂತರಿಕ ಒಪ್ಪಂದ ಪತ್ರದಲ್ಲಿ ಆ ಒಪ್ಪಂದ ಯಾವ ದಿನಾಂಕಂದು ನೇರವೇರಲ್ಪಟ್ಟಿದ್ದು ದಿನಾಂಕ ನಮುದಾಗಿರಬೇಕುಎಂದರೆ ಮಾಹಿತಿ ಇಲ್ಲ. ಅದಕ್ಕಾಗಿ ಪ್ರಾರಂಭದಲ್ಲಿ ಒಂದು ಕಾಲಂ ಇರುತ್ತದೆ ಎಂದರೆ ಮಾಹಿತಿ ಇಲ್ಲ. ಸದರಿ ಒಪ್ಪಂದ ಪತ್ರದಲ್ಲಿ ಈ ದಿನಾಂಕದಿಂದ ನೇ ಇಸ್ವಿಯಲ್ಲಿ ನೇ ತಿಂಗಳ ಈ ದಿನಾಂಕದಂದು ಏರ್ಪಟ್ಟಿತು ಎಂದು ಪಾರ್ಮೆಟ್ ಇರುತ್ತದೆ ಎಂದರೆ ಸರಿ . ಆ ರೀತಿ ನಿಪಿ-11 ರಲ್ಲಿ ಯಾವುದೇ ಬರವಣಿಗೆ ಇಲ್ಲದೇ ಖಾಲಿ ಇದೆ ಎಂದರೆ ಸರಿ . ಒಂದುವೇಳೆ ಅಂತಹ ಒಪ್ಪಂದ ಪತ್ರ ಆಗಿದ್ದರೆ ಸ್ವಸಹಾಯ ಸಂಘದ ಪ್ರತಿಯೊಂದು ಸದಸ್ಯರು ಎಷ್ಟು ಸಾಲವನ್ನು ಪಡೆಯಲು ಬಯಸಿದ್ದಾರೆ ಹಾಗೂ ಮಾಸಿಕವಾಗಿ ಎಷ್ಟು ಹಣವನ್ನು ಮರು ಪಾವತಿಸುತ್ತಾರೆ ಎನ್ನುವ ಬಗ್ಗೆ ನಮೂದು ಮಾಡಬೇಕಾಗುತ್ತದೆ ಎಂದರೆ ಮಾಹಿತಿ ಇಲ್ಲ . ಎಷ್ಟು ಮೊತ್ತದ ಹಣವನ್ನು ಯಾವ ಯಾವ ಸದಸ್ಯರು ಪಡೆಯಬೇಕಾಗುತ್ತದೆ ಎನ್ನುವುದನ್ನು ನಿಖರವಾಗಿ ನಮೂದಿಸಬೇಕಾಗುತ್ತದೆ ಎಂದರೆ ಸರಿ. ಆಂತರಿಕ ಪತ್ರದಲ್ಲಿ ಸಂಘದ ಪರವಾಗಿ ಯಾರು ಯಾರಿಗೆ ಅರ್ಜಿ ಸಲ್ಲಿಸಲು ಅಧಿಕಾರ ನೀಡಿದ್ದೇವೆ ಹಾಗೂ ಸಹಿ ಮಾಡಲು ಯಾರು ಅಧಿಕಾರ ಹೊಂದಿದ್ದಾರೆ ನಮೂದಿಸಬೇಕು ಎಂದರೆ ಹೌದು ನಂತರ ಸಾಕ್ಷಿ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ . ಆಂತರಿಕ ಒಪ್ಪಂದ ಪತ್ರಕ್ಕೆ ಇಬ್ಬರು ಸಾಕ್ಷಿದಾರರ ಸಹಿಗಳ ಅವಶ್ಯಕತೆ ಇರುತ್ತದೆ ಎಂದರೆ ಮಾಹಿತಿ ಇಲ್ಲ . ನಮ್ಮ ಫಾರ್ಮೆಟ್ ನ ಕೊನೆಯಲ್ಲಿ ಇಬ್ಬರು ಸಾಕ್ಷಿದಾರರ ಸಹಿ ಬಗ್ಗೆ ಇದೆ ಎಂದರೆ ಸರಿ . ಆಂತರಿಕ ಒಪ್ಪಂದ ಪತ್ರ ಕಾಲಂ ನಂ. 11 ರಲ್ಲಿ ಎಲ್ಲಾ ಸದಸ್ಯರು ಯಾವ ದಿನಾಂಕದಂದು ಸಹಿ ಮಾಡಿದ್ದಾರೆ ಎಂಬ ಬಗ್ಗೆ ಕಾಲಂ ಇದೆ ಎಂದರೆ ಸರಿ . ಒಪ್ಪಂದ ಪತ್ರ ಯಾವ ದಿನಾಂಕದಂದು ಆಯಿತು ಯಾರು ಯಾರಿಗೆ ಬರೆದುಕೊಟ್ಟಿದ್ದರು ಬರೆದಿಲ್ಲ ಎಂದರೆ ಸಾಕ್ಷಿ ನೆನಪಿಲ್ಲದೇ ಬರೆದಿಲ್ಲದಿರಬಹುದು ಎಂದು ನುಡಿದಿರುತ್ತಾರೆ . ಇಂತಹ ದಾಖಲಾತಿಯನ್ನು ಪಡೆದ ವ್ಯವಸ್ಥಾಪಕರು ಸೀಲು ಹಾಗೂ ಸಹಿಯನ್ನು ಮಾಡಬೇಕಾಗುತ್ತದೆ ಎಂದರೆ ಸರಿ . ನಿಪಿ-11 ರಲ್ಲಿ ಅಂತಹ ಯಾವುದೇ ಸಹಿ ಹಾಗೂ ಸೀಲು ಇಲ್ಲ ಎಂದರೆ ಸರಿ . ನಿಪಿ-11 ನಾಲ್ಕು ಪುಟಗಳು ನಮ್ಮ ಪ್ರಕಾರ ಆಂತರಿಕ ಪತ್ರ ಆಗಿರುತ್ತದೆ . ಸಾಲದ ಅರ್ಜಿಯಲ್ಲಿ ಎಷ್ಟು ಪುಟಗಳು

ಇರುತ್ತವೆ ಮಾಹಿತಿ ಇಲ್ಲ. ನಮ್ಮ ಸಂಘದ ಸಾಲದ ಖಾತೆಗೆ ಸಂಬಂಧಪಟ್ಟಂತೆ ಸಾಪ್ಟವೇರ್ ನಲ್ಲಿ ಮಾಹಿತಿ ಇರುತ್ತದೆ ಎಂದರೆ ಸರಿ . ನಾವು smart bank software ಬಳಸುತ್ತೇವೆ . ಶ್ರೀದೇವಿ ಸಂಘ ಗಂಗೇಕೊಳ್ಳಕ್ಕೆ ಒಂದೇ ಸಾಲ ಕೊಟ್ಟಿರುತ್ತೇವೆ . ಒಂದು ಸಾಲದ ಖಾತೆ ಸಾಪ್ಟವೇರ್ ನಲ್ಲಿ ಬಳಸುವುದರಿಂದ ಒಂದೇ ರೀತಿಯ ಮಾಹಿತಿ ಬರುತ್ತದೆ ಎಂದರೆ ಸರಿ . ಒಂದು ಸಾಲದ ಖಾತೆಯಲ್ಲಿ ಸಾಲಗಾರರ ಹೆಸರು , ಜಾಮೀನುದಾರರ ಹೆಸರು ಹಾಗೂ ಅವರ ವಿಳಾಸ ನಮೂದಾಗಿ ಬರುತ್ತದೆ ಎಂದರೆ ಸರಿ . ಸಾಲ ಯಾವ ದಿನಾಂಕದಂದು ಮಂಜೂರಾಯಿತು ಮತ್ತು ಠರಾವು ಆದ ದಿನಾಂಕ ಮತ್ತು ಠರಾವು ನಂಬರ ಸಾಲದ ಖಾತೆಯಲ್ಲಿ ನಮೂದಾಗಿರುತ್ತದೆ ಎಂದರೆ ಮಾಹಿತಿ ಇಲ್ಲ . ನಾನು ನಮ್ಮ ಸಂಸ್ಥೆಯಲ್ಲಿ ಶಾಖಾ ಕಾರ್ಯ ನಿರ್ವಾಹಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ . ನಾನು ಕಳೆದ ಒಂದು ವರ್ಷದಿಂದ ಫಿರ್ಯಾದು ಶಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಒಂದು ಸಾಲದ ಖಾತೆಯಲ್ಲಿ ಆ ಖಾತೆಗೆ ಸಂಬಂಧಿಸಿದ ಬಡ್ಡಿ , ಒಂದುವೇಳೆ ದಂಡದ ಬಡ್ಡಿ ಇದ್ದಲ್ಲಿ ದಂಡದ ಬಡ್ಡಿ ನಮೂದಾಗುತ್ತದೆ ಎಂದರೆ ಸರಿ . ನಿಪಿ-13 ಈ ಪ್ರಕರಣಕ್ಕೆ ಸಂಬಂಧಪಟ್ಟ ಸಾಲದ ಖಾತೆ ಎಂದರೆ ಸರಿ . ನಮ್ಮ ಪ್ರಕಾರ ಈ ಪ್ರಕರಣದಲ್ಲಿ ಸಾಲಗಾರರು ಪ್ರತಿನಿಧಿ 1 ರಿಂದ 3 ಶಿಲ್ಪಾ , ಲಕ್ಷ್ಮೀ ಶೇಷ್ಟು ತಾಂಡೇಲ್ , ಉಮಾ ದತ್ತಾ ಕುಮಟಾಕಾರ ಹಾಗೂ ಸದಸ್ಯರಾದ ಪವಿತ್ರಾ ನಾಗರಾಜ ತಾಂಡೇಲ , ಸುಮಿತ್ರಾ ತಾಂಡೇಲ್ ಇರುತ್ತಾರೆ . ಅವರೆಲ್ಲರ ಹೆಸರು ಸಾಲದ ಖಾತೆಯಲ್ಲಿ ನಮೂದಾಗಿದೆ . ಪ್ರತಿಯೊಬ್ಬರು 75 ಸಾವಿರ ರೂಪಾಯಿ ಸಮನಾಗಿ ತೆಗೆದುಕೊಂಡಿರಬಹುದು. ಆಂತರಿಕ ಒಪ್ಪಂದ ಪತ್ರದಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಹಣ ಬೇಕು ನಮೂದಾಗಿರಬೇಕು ಎಂದರೆ ಮಾಹಿತಿ ಇಲ್ಲ. ನಮ್ಮ ಬ್ಯಾಂಕಿನ ವ್ಯವಹಾರ ಪಾರದರ್ಶಿಕವಾಗಿರಬೇಕೆಂದು ಹಾಗೂ ನಿಖರವಾಗಿರಬೇಕೆಂದು ನಾವು ಸಾಪ್ಟವೇರ್ ನ್ನು ಬಳಸುತ್ತೇವೆ ಎಂದರೆ ಸರಿ . ಸಾಪ್ಟವೇರ್ ಬಳಸಿದರೆ ಒಂದು ಅಕೌಂಟ್ ನ ಸ್ಟೇಟಮೆಂಟ್ ಎಷ್ಟು ಬಾರಿ ತೆಗೆದರೂ ಒಂದೇ ರೀತಿ ಬರುತ್ತದೆ ಎಂದರೆ ಸರಿ . ಸಾಪ್ಟವೇರ್ ನ್ನು ಹೊರತು ಪಡಿಸಿ ನಮಗೆ ಹೇಗೋ ಬೇಕು ಹಾಗೆ ತಯಾರು ಮಾಡ ಬೇಕೆಂದರೆ ಬೇರೆ ಸಿಸ್ಟಮ್ ನಲ್ಲಿ ತಯಾರು ಮಾಡಬೇಕು ಎಂದರೆ ಸರಿ . ಒಮ್ಮೆ ಕನ್ನಡದಲ್ಲಿ ಅಥವಾ ಇಂಗ್ಲೀಷನಲ್ಲಿ ಸ್ಟೇಟ್

ಮೆಂಟ್ ನ್ನು ತಯಾರು ಮಾಡಿದರೆ ಅಕೌಂಟ್ ಸ್ಟೇಟ್ ಮೆಂಟ್ ಅದೇ ಭಾಷೆಯಲ್ಲಿ ಬರುತ್ತದೆ ಎಂದರೆ ಸರಿ . ಈ ಪ್ರಕರಣದಲ್ಲಿ ಸ್ಟೇಟ್ ಮೆಂಟ್ ಇಂಗ್ಲೀಷನಲ್ಲೇ ಬರುತ್ತದೆ . ನಿಪಿ-13 ನ್ನು ಏನು ಟ್ರಾಜೆಂಕ್ಷನ್ ಆಗಿದೆ ಅದನ್ನು ಟೈಪ್ ಮಾಡಿ ದೃಡೀಕರಣ ಮಾಡಿ ಕೊಟ್ಟಿರುತ್ತೇವೆ . ಸಾಪ್ಟವೇರ್ ನಲ್ಲಿ ಏನಿದೆ ಅದೇರೀತಿ ಮಾಡಿಕೊಟ್ಟಿರುತ್ತೇವೆ . ನಿಪಿ- 13 ನ್ನು ಹೊರತು ಪಡಿಸಿ ಬೇರೆ ಯಾವುದೇ ಅಕೌಂಟ್ ಸ್ಟೇಟ್ ಮೆಂಟ್ ಈ ಖಾತೆಗೆ ಸಂಬಂಧಪಟ್ಟಂತೆ ಇದೆ . ನಿಪಿ-13 ಇದು ಟೈಪ್ ಮಾಡಿ ಕೊಟ್ಟಿರುವುದು . ನಿಪಿ- 13 ರಲ್ಲಿ ಸಂಗತಿಯನ್ನು ಬಿಟ್ಟು ಬೇರೆ ದಾಖಲಾತಿಯನ್ನು ಕೊಟ್ಟರೆ ಅದು ನಾವು ಸೃಷ್ಟಿ ಮಾಡಿ ಕೊಟ್ಟ ದಾಖಲೆ ಆಗುತ್ತದೆ ಎಂದರೆ ಸರಿ .

6. ಒಂದು ಸಾಲ ಮಂಜೂರಾದ ನಂತರ ಸ್ವಸಹಾಯ ಸಂಘಕ್ಕೆ ಸಾಲ ನೀಡಿಕೆ ಎಂದು ಅವರಿಂದ ಸಹಿಗಳನ್ನು ಪಡೆದುಕೊಳ್ಳುತ್ತೇವೆ ಎಂದರೆ ಮಾಹಿತಿ ಇಲ್ಲ . ನಿಪಿ- 18 ನಾನು ಮಾಹಿತಿ ಇಲ್ಲ ಎಂದು ಹೇಳಿರುವ ದಾಖಲಾತಿ ಎಂದರೆ ಸರಿ. ಆ ದಾಖಲಾತಿಯಲಿ ಸ್ವಸಹಾಯ ಗುಂಪಿನ ಬಗ್ಗೆ ಮಾಹಿತಿ ಇರುವ ಬಗ್ಗೆ ಒಂದು ಕಾಲಂ ಇದೆ ಎಂದರೆ ನೆನಪಿಲ್ಲ. ಗುಂಪಿನ ಮೂಲ ಮಾಹಿತಿ ಎಂಬ ಬಗ್ಗೆ ಇರುವ ಕಾಲಂ ಇದೆ ಎಂದರೆ ಸರಿ . ಅದರಲ್ಲಿ 10 ಕಾಲಂ ನ ಪ್ರಕಾರ ಯಾವ ಸಂಘ ಅರ್ಜಿ ಸಲ್ಲಿಸುತ್ತದೆ ಆ ಉಳಿತಾಯ ಖಾತೆಗೆ ಹಣ ಸಂದಾಯ ಮಾಡಲು ನಂಬರ ನಮೂದಿಸಬೇಕಾಗುತ್ತದೆ ಎಂದರೆ ಸರಿ . ಆ ಖಾತೆಗೆ ಮಾತ್ರ ಹಣವನ್ನು ಸಂದಾಯ ಮಾಡಬೇಕಾಗುತ್ತದೆ ಎಂದರೆ ಸರಿ . ನಾವು ಈ ಪ್ರಕರಣದಲ್ಲಿ ಹಣ ಸಂದಾಯ ಮಾಡಿದ್ದೇವೆ ಎಂದು ಹೇಳುವ ಖಾತೆ ಯಾವ ಖಾತೆ ನೆನಪಿಲ್ಲ . ಯಾವುದೇ ಸಂಘಕ್ಕೆ ಸಾಲವನ್ನು ಕೊಡುವಾಗ ಆ ಸಂಘವನ್ನು ಪರಿಷ್ಕರಿಸಿ ಆ ಗುಂಪಿಗೆ ಶ್ರೇಣಿಯನ್ನು ಕೊಡುತ್ತೇವೆ ಎಂದರೆ ಸರಿ . ಶಾಖಾ ವ್ಯವಸ್ಥಾಪಿ.ಪಕರು ಸಂಘ ಪರಿಶೀಲಿಸಿ ಶ್ರೇಣಿಯನ್ನು ಕೊಡುತ್ತಾರೆ ಎಂದರೆ ಸರಿ . ಒಂದು ಸಂಘ ಆರಂಭವಾದ ಎಷ್ಟು ಸಮಯದ ನಂತರ ಸಾಲದ ಅರ್ಜಿಯನ್ನು ಸಲ್ಲಿಸಲು ಅರ್ಹತೆ ಇರಬಹುದು ನೆನಪಿಲ್ಲ. ಈ ಸಂಘಕ್ಕೆ ಯಾವ ಶ್ರೇಣಿಯನ್ನು ಕೊಟ್ಟಿದ್ದಾರೆ ನೆನಪಿಲ್ಲ. ಆ ಶ್ರೇಣಿಯ ಆಧಾರದ ಮೇಲೆ ಸಂಘ ಸಾಲಕ್ಕೆ ಅರ್ಹ ಇದೆಯೋ ಇಲ್ಲವೋ ತೀರ್ಮಾನಿಸಲಾಗುತ್ತದೆ ಎಂದರೆ ಮಾಹಿತಿ ಇಲ್ಲ. ಶ್ರೇಣಿಯನ್ನು ಶೇಕಡವಾರು ಅಂಕದ ಮೂಲಕ

ಅಳೆಯಲಾಗುತ್ತದೆ ಎಂದರೆ ಮಾಹಿತಿ ಇಲ್ಲ . ಶ್ರೇಣಿಕರಿಸುವ ವ್ಯಕ್ತಿ ಶಾಖಾ ವ್ಯವಸ್ಥಾಪಕರು ಸಂಘದ ಸಾಲ ನೀಡಿಕೆ ಪಾರ್ಮೆಟ್ ನಲ್ಲಿ ಗುಂಪಿನ ಪರಿಷ್ಕರಣೆ ಕಾಲಂನಲ್ಲಿ ಎಲ್ಲವನ್ನು ನಮೂದಿಸಬೇಕಾಗುತ್ತದೆ ಎಂದರೆ ಸರಿ . ಯಾವತ್ತು ಸಂಘವನ್ನು ಪರಿಶೀಲಿಸಿದ್ದಾರೆ ಅಲ್ಲಿಯವರೆಗಿನ ಸಂಘದ ಸ್ಥಿತಿ ಗತಿಗಳ ಬಗ್ಗೆ ನಮೂದಿಸಬೇಕಾಗುತ್ತದೆ ಎಂದರೆ ಮಾಹಿತಿ ಇಲ್ಲ . ಆ ಕಾರಣ ಕಾಲಂ 5 ರಲ್ಲಿ ಗುಂಪಿನ ಪರಿಷ್ಕರಣೆ ಹಣಕಾಸಿನ ಸ್ದಿತಿ – ದಿನಾಂಕದವರೆಗೆ ಎಂದು ಇದೆ ಎಂದರೆ ಮಾಹಿತಿ ಇಲ್ಲ . ಸಾಕ್ಷಿ ದಾಖಲಾತಿಯನ್ನು ನೋಡಿ ಆ ರೀತಿ ಕಾಲಂ ನಂ . 5 ರಲ್ಲಿ ಇದೆ ಎಂದು ನುಡಿದಿರುತ್ತಾರೆ . ಆ ಸಂಘದ ಹೊಣೆಗಾರಿಕೆಗಳು ಹಾಗೂ ಆಸ್ತಿಗಳ ಬಗ್ಗೆ ಹಾಗೂ ಉಳಿಕೆಗಳ ಬಗ್ಗೆ ಕೂಡ ಸದರಿ ಕಾಲಂನಲ್ಲಿ ನಮೂದಿಸಬೇಕಾಗುತ್ತದೆ ಎಂದರೆ ಮಾಹಿತಿ ಇಲ್ಲ . ಸಾಕ್ಷಿ ದಾಖಲಾತಿ ನೋಡಿ ಇದೆ ಎಂದು ನುಡಿದಿರುತ್ತಾರೆ . ಈ ಎಲ್ಲಾ ಮಾಹಿತಿಗಳನ್ನು ನಮ್ಮ ಶಾಖಾ ವ್ಯವಸ್ಥಾಪಕರು ಎಲ್ಲಾ ಪರಿಶೀಲನೆ ಮಾಡಿದ ಮೇಲೆ ಸಾಲವನ್ನು ಮಂಜೂರು ಮಾಡುತ್ತಾರೆ ಎಂದರೆ ಮುಖ್ಯ ಕಾರ್ಯ ನಿರ್ವಾಹಕರು ಪರಿಶೀಲನೆ ಮಾಡಿ ಆಡಳಿತ ಮಂಡಳಿಯ ಮುಂದೆ ಇಟ್ಟಿದ್ದಾರೆ ಎಂದು ನುಡಿದಿರುತ್ತಾರೆ . ಒಂದುವೇಳೆ ಪರಿಷ್ಕರಣೆ ಮಾಡಿದ್ದರೆ ಆ ಬಗ್ಗೆ ನಮೂದಿಸುತ್ತಿದ್ದರು ಪರಿಷ್ಕರಣೆ ಮಾಡಿಲ್ಲ ಆ ಕಾರಣ ಅದನ್ನು ನಮೂದಿಸಿಲ್ಲ ಎಂದರೆ ಸಾಕ್ಷಿ ನೆನಪಿಲ್ಲದೇ ಬರೆದಿಲ್ಲದಿರಬಹುದು ಎಂದು ನುಡಿದಿರುತ್ತಾರೆ . ನೆನಪಿಲ್ಲದೇ ಬರೆದಿರುವ ಸಾಲದ ಅರ್ಜಿಯನ್ನು ಆಡಳಿತ ಮಂಡಳಿಯ ಮುಂದೆ ಹೋದರೆ ಅದನ್ನು ಪುರಸ್ಕರಿಸುವುದಿಲ್ಲ ಎಂದರೆ ಸಾಕ್ಷಿ ಪುರಸ್ಕರಿಸುವುದಿಲ್ಲ ಆದರೆ ಆಡಳಿತ ಸಭೆಯ ಮುಂದೆ ಆರೋಪಿ ಕೂಡ ಮಿಟಿಂಗ್ ನಲ್ಲಿ ಇದ್ದರು ಎಂದು ನುಡಿದಿರುತ್ತಾರೆ . ಆರೋಪಿ ಆದಿನ ಮಿಟಿಂಗ್ ನಲ್ಲಿ ಇದ್ದರು ಎಂದು ಠರಾವಿನ ಆಧಾರದ ಮೇಲೆ ಹೇಳುತ್ತಿದ್ದೇನೆ . ಸಾಲ ಮಂಜೂರಾಗುವ ಮಿಟಿಂಗ್ ನಲ್ಲಿ ಸಾಲ ಮಂಜೂರು ಮಾಡುವ ಎಲ್ಲರೂ ಹಾಜರಿರುತ್ತಾರೆ . ಎಲ್ಲರ ಸಹಿಗಳನ್ನು ಪಡೆಯುತ್ತಾರೆಯೋ ಇಲ್ಲವೋ ಮಾಹಿತಿ ಇಲ್ಲ . ಆ ದಿನ ಒಟ್ಟೂ ಎಷ್ಟು ಸಾಲದ ಅರ್ಜಿಗಳು ಮಂಜೂರಾಗಿವೆ ನೋಡಿ ಹೇಳಬೇಕು . ಯಾವ ಯಾವ ಶರತ್ತಿಗೆ ಒಳಪಟ್ಟು ಸಾಲ ಮಂಜೂರಾಗಿದೆ ಅದನ್ನು ನಿಪಿ-8 ರ ಎರಡನೇ ಪುಟದಲ್ಲಿ ಬರೆಯಬೇಕುಎಂದರೆ ಸಾಕ್ಷಿ ನೋಡಿ ಹೇಳಬೇಕು ಎಂದು

ನುಡಿದಿರುತ್ತಾರೆ. ಯಾವ ಯಾವ ದಾಖಲೆಗಳನ್ನು ಪಡೆಯಬೇಕು ಎಂಬುದನ್ನು ಮಿಟಿಂಗ್ ನಲ್ಲಿ ತಿಳಿಸಿರುತ್ತಾರೆ ಆ ಬಗ್ಗೆ ಕೂಡ ನಮೂದಿರಬೇಕು ಎಂದರೆ ಮಾಹಿತಿ ಇಲ್ಲ. ಸಾಲ ಮಂಜೂರಾಗದೇ ಇದ್ದಲ್ಲಿ ಮಾತ್ರ ಸಾಲದ ಮಂಜೂರಾತಿ ಶರತ್ತು ಎಷ್ಟು ಮೊತ್ತ ಎಷ್ಟು ಅವಧಿಗೆ ಎಂಬುದು ನಮೂದಾಗಿರುವುದಿಲ್ಲ ಎಂದರೆ ಮಾಹಿತಿ ಇಲ್ಲ. ಅರ್ಜಿಯ ಹಿಂದುಗಡೆ ಆಕರಿಸಬೇಕಾದ ಬಡ್ಡಿ ನಮೂದಿಸಬೇಕಾಗುತ್ತದೆ ಎಂದರೆ ದಾಖಲಾತಿ ನೋಡಿ ಹೇಳಬೇಕು . ನಿಪಿ-8 ಎರಡನೇ ಪುಟದಲ್ಲಿ ಮಂಜೂರಾತಿ ಶರತ್ತು ಎಂಬ ಕಾಲಂ ಯಾವ ಯಾವ ದಾಖಲಾತಿ ಪಡೆಯಬೇಕು ಎಂಬ ಬಗ್ಗೆ ಎನ್ನುವ ಕಾಲಂ , ಹಾಗೂ ಬಡ್ಡಿದರ ಮತ್ತು ಎಷ್ಟು ತಿಂಗಳಲ್ಲಿ ಮರು ಪಾವತಿಸಲಾಗುತ್ತದೆ ಎಂಬ ಬಗ್ಗೆ ಕಾಲಂಗಳು ಇವೆ ಎಂದರೆ ಸರಿ . ಇವುಗಳನ್ನು ತುಂಬಿದ ನಂತರ ಸಾಲಗಾರರು ಜಾಮೀನುದಾರರು ಹಾಗೂ ಮುಖ್ಯ ಕಾರ್ಯನಿರ್ವಾಹಕರ ಸಹಿಯನ್ನು ಪಡೆಯಬೇಕಾಗುತ್ತದೆ ಎಂದರೆ ಸಾಕ್ಷಿ ದಾಖಲಾತಿ ನೋಡಿ ಹೇಳಬೇಕು ಎಂದು ನುಡಿದಿರುತ್ತಾರೆ . ಮುಂದುವರೆದು ಸಾಕ್ಷಿ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ . ನಿಪಿ-8 ರಲ್ಲಿ ಎಷ್ಟು ಮೊತ್ತದ ಸಾಲ ಗುಂಪಿನ ಪರಿಷ್ಕರಣೆ ಎನಲ್ಲುವ ಕಾಲಂ ಹಾಗೂ ಹೊಣೆಗಾರಿಕೆ ಆಸ್ತಿಗಳು ಮತ್ತು ಉಳಿಕೆ ಕಾಲಂ ಗುಂಪಿನಲ್ಲಿ ಚಾಲ್ತಿ ಮೂಲಧನ ಎಷ್ಟು ಎಂಬ ಕಾಲಂ ಹಾಗೂ ಗುಂಪಿಗೆ ಸಿಸಿ ಮಿಟಿಂಗ್ ನಿರ್ಧರಿಸುವುದು ಎಂಬ ಕಾಲಂ , ಮಂಜೂರಾತಿ ಶರತ್ತು ಎಂಬ ಕಾಲಂ, ಪಡೆಯಬೇಕಾದ ದಾಖಲಾತಿಗಳು , ಬಡ್ಡಿದರ , ಮರು ಪಾವತಿ ಎಂಬ ಬಗ್ಗೆ ಇರುವ ಕಾಲಂ ಯಾವುದೇ ಬರವಣಿಗೆ ಇಲ್ಲದೇ ಖಾಲಿ ಬಿಟ್ಟಿರುತ್ತೇವೆ ಎಂದರೆ ಸಾಕ್ಷಿ ಶಾಖಾ ವ್ಯವಸ್ಥಾಕರು ನೆನಪಿಲ್ಲದೇ ಬರೆಯದೇ ಇರಬಹುದು ಎಂದು ನುಡಿದಿರುತ್ತಾರೆ . ನಿಪಿ-8 ರಲ್ಲಿ ಯಾರು ಸಾಲಗಾರರು , ಜಾಮೀನುದಾರರ ಸಹಿಯಾಗಲೀ ಹಾಗೂ ಯಾರು ಆ ದಾಖಲಗೆ ಸಹಿ ಪಡದಿದ್ದಾರೆ ಶಾಖಾ ವ್ಯವಸ್ಥಾಪಕರ ಸಹಿ ಇಲ್ಲ ಎಂದರೆ ಸಾಕ್ಷಿ ಈ ಫಾರ್ಮೆಟ್ ನಲ್ಲಿ ಆ ರೀತಿ ಇಲ್ಲ ಎಂದು ನುಡಿದಿರುತ್ತಾರೆ .

7. ಸಾಲ ನೀಡುವ ಸಂದರ್ಭದಲ್ಲಿ ಡಿಮಾಂಡ ಪ್ರಾಮಿಸರಿ ನೋಟನ್ನು ಪಡೆದುಕೊಳ್ಳಬೇಕಾಗುತ್ತದೆ ಎಂದರೆ ಸರಿ . ಈ ಪ್ರಕರಣದಲ್ಲಿ ನಾವು ಪಡೆದಿದ್ದೇವೆ ಎಂದು ಹೇಳುವ ದಾಖಲಾತಿ ನಿಪಿ-9 ಎಂದರೆ ಸರಿ .

ನಿಪಿ-9 ರಲ್ಲಿ ಎಷ್ಟು ಸಾಲವನ್ನು ನಿಖರವಾಗಿ ಯಾವ ದಿನಾಂಕದಂದು ಕೊಟ್ಟಿದ್ದೇವೆ ಎಂದು ನಮೂದಿಸಬೇಕಾಗುತ್ತದೆ ಎಂದರೆ ಸಾಕ್ಷಿ ನೋಡಿ ಹೇಳಬೇಕು ಎಂದು ನುಡಿದಿರುತ್ತಾರೆ. ಎಷ್ಟು ಬಡ್ಡಿಯನ್ನು ನಮ್ಮ ಶಾಖೆಯವರು ಆಕರಣೆ ಮಾಡಬೇಕಾಗುತ್ತದೆ ಎಂದರೆ ಸರಿ . ಆ ರೀತಿ ಬಡ್ಡಿಯನ್ನು ಬರೆದರೆ ಮಾತ್ರ ಬಡ್ಡಿಯನ್ನು ಆಕರಣೆ ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ . ಡಿಮಾಂಡ ಪ್ರಾಮಿಸರಿ ನೋಟ್ ನ್ನು ಸಾಕ್ಷಿದಾರರ ಸಮ್ಮುಖದಲ್ಲೇ ಕೆಳಗೆ ಸಹಿ ಮಾಡಿದ ವ್ಯಕ್ತಿಗಳೇ ಸಹಿ ಮಾಡಿದ್ದಾರೆ ಎಂದು ಪುರಾವೆ ಮಾಡಲು ಸಾಕ್ಷಿದಾರರ ಸಹಿಗಳನ್ನು ಪಡೆಯಬೇಕಾಗುತ್ತದೆ ಎಂದರೆ ಸಾಕ್ಷಿ ಪಡೆಯದೇ ಇದ್ದರೆ ನಡೆಯುತ್ತದೆ ಎಂದು ನುಡಿದಿರತ್ತೂರೆ. ಯಾವ ಸಾಲದ ಖಾತೆಗೆ ಸಂಬಂಧಪಟ್ಟಂತಹ ಡಿಮಾಂಡ ಪ್ರಾವಿಸರಿ ನೋಟ್ ಎಂಬ ಬಗ್ಗೆ ಖಾತೆ ನಂಬರನ್ನು ಡಿಮಾಂಡ ಪ್ರಾಮಿಸರಿ ನೋಟ್ ಗೆ ಬರೆಯಬೇಕಾಗುತ್ತದೆ ಎಂದರೆ ಸಾಕ್ಷಿ ಫಾರ್ಮೆಟ್ ನಲ್ಲಿ ಇದ್ದರೆ ಬರೆಯಬೇಕಾಗುತ್ತದೆ ಎಂದು ನುಡಿದಿರುತ್ತಾರೆ. ಫಾರ್ಮೆಟ್ ನಲ್ಲಿರುವ ಎಲ್ಲಾ ಸಂಗತಿಗಳನ್ನು ಬರೆಯಬೇಕು ಎಂದರೆ ಮಾಹಿತಿ ಇಲ್ಲ . ನಿಪಿ-9 ರಲ್ಲಿಎಷ್ಟು ಮೊತ್ತದ ಸಾಲ ಯಾವ ದಿನಾಂಕದಂದು ಮಂಜೂರು ಮಾಡಲಾಗಿದೆ ಎಷ್ಟು ಬಡ್ಡಿ ಎನ್ನುವ ಬಗ್ಗೆ ಎಲ್ಲಾ ಸ್ಥಳಗಳನ್ನು ಖಾಲಿ ಬಿಟ್ಟಿದ್ದೇವೆ ಯಾವುದೇ ಭರ್ತಿ ಮಾಡಿಲ್ಲ ಎಂದರೆ ನೆನಪಿಲ್ಲದೇ ಬರೆದಿಲ್ಲದಿರಬಹುದು ಎಂದು ನುಡಿದಿರುತ್ತಾರೆ.

8. ಸಾಲವನ್ನು ಕೊಟ್ಟಿದ್ದೆ ಆದಲ್ಲಿ ವಚನ ಪತ್ರದಲ್ಲಿ ಎಲ್ಲಾ ಬರವಣಿಗೆಯನ್ನು ಮಾಡಿಕೊಂಡು ಸಾಲವನ್ನು ಕೊಡುತ್ತಾರೆ ಎಂದರೆ ಇರಬಹುದು . ಸಾಲಕ್ಕೆ ಸಂಬಂಧಪಟ್ಟಂತೆ ಯಾವ ಯಾವ ದಾಖಲಾತಿಗಳನ್ನು ಪಡೆದುಕೊಳ್ಳಬೇಕು ಎಂದು ಹೇಳಿರುವ ಪಾರ್ಮೆಟ್ ಗಳಲ್ಲಿ ಸಂಪೂರ್ಣ ಬರವಣಿಗೆ ಮಾಡಿ ಸಾಲಗಾರರ ಹಾಗೂ ಜಾಮೀನುದಾರರ ಸಹಿಯನ್ನು ಪಡೆದು ಆ ಸಹಿಯನ್ನು ಪಡೆದ ವ್ಯಕ್ತಿಯ ಸೀಲ್ ಹಾಗೂ ಸಹಿ ಮಾಡಿ ಎಲ್ಲಾ ಪ್ರಕ್ರಿಯೆ ಮುಗಿದ ನಂತರ ಸಾಲದ ಹಣವನ್ನು ಯಾವ ಖಾತೆಗೆ ಹಾಕಬೇಕು ಎಂದು ಹೇಳಿದ ಖಾತೆಗೆ ಟ್ರಾನ್ಸಫರ್ ಮಾಡುತ್ತೇವೆ ಎಂದರೆ ಸರಿ . ವಚನ ಪತ್ರದಲ್ಲಿ ಮೇಲೆ ಶ್ರೀದೇವಿ ಸಂಘ ಎಂಬುದನ್ನು ಬಿಟ್ಟರೆ ಸಾಕೀನಃ ಎಂಬುವ ಸ್ಥಳವನ್ನು ಖಾಲಿ ಬಿಟ್ಟಿದ್ದೇವೆ ಎಂದರೆ ಸರಿ . ಮುಖ್ಯವಾಗಿ ಎಷ್ಟು ಹಣವನ್ನು

ಸಾಲವಾಗಿ ಕೊಡುತ್ತಿದ್ದೇವೆ ನಮೂದು ಮಾಡಬೇಕು ಎಂದರೆ ಸರಿ . ವಚನ ಪತ್ರದಲ್ಲಿ ಎಷ್ಟು ಕಂತುಗಳಲ್ಲಿ ಎಷ್ಟು ಬಡ್ಡಿಯಲ್ಲಿ ಎಷ್ಟು ಹಣವನ್ನು ಸಂದಾಯ ಮಾಡಬೇಕು ಎಂಬುದನ್ನು ಕೂಡ ನಮೂದು ಮಾಡಬೇಕು ಎಂದರೆ ಸರಿ . ಆ ಯಾವ ನಮೂನೆಗಳು ಇಲ್ಲದೇ ಸದರಿ ದಾಖಲಾತಿ ಖಾಲಿ ಇದೆ ಎಂದರೆ ಸಾಕ್ಷಿ ನೆನಪಿಲ್ಲದೇ ಖಾಲಿ ಇರಬಹುದು ಎಂದು ನುಡಿದಿರುತ್ತಾರೆ. ನೆನಪಿಲ್ಲದೇ ಈ ಎಲ್ಲಾ ದಾಖಲಾತಿಗಳನ್ನು ಬರೆಯದೇ ಇರುವ ವ್ಯಕ್ತಿ ಪವಿತ್ರಾ ನಾಗರಾಜ ಆಚಾರಿ ಆಗಿರುತ್ತಾರೆ. ಪವಿತ್ರಾ ನಾಗರಾಜಯವರೇ ನಿಪಿ-10 ದಾಖಲಾತಿಯನ್ನು ಪಡೆದಿದ್ದಾರೆ ಎಂದು ತೋರಿಸಲು ಅವರ ಸಹಿ ಇಲ್ಲ ಎಂದರೆ ಸಾಕ್ಷಿ ಪಾರ್ಮೆಟ್ ನಲ್ಲಿ ಸಹಿ ಎಂದು ಮೆನ್ಶನ್ ಮಾಡಿದ್ದರೆ ಮಾತ್ರ ಸಹಿ ಇರುತ್ತದೆ ಎಂದು ನುಡಿದಿರುತ್ತಾರೆ. ನಿಪಿ-9 ಮತ್ತು 10 ರಲ್ಲಿ ಎಲ್ಲಿಯೂ ಕೂಡ ಆರೋಪಿಯ ಸಹಿ ಇಲ್ಲ ಎಂದರೆ ಸರಿ . ಸಾಲದ ಅರ್ಜಿಯಲ್ಲಿಯೂ ಕೂಡ ಆರೋಪಿಯ ಸಹಿ ಇಲ್ಲ ಎಂದರೆ ಸಾಕ್ಷಿ ಸಾಲದ ಅರ್ಜಿ ಕೊಡುವ ಮೂರು ಪ್ರತಿನಿಧಿಗಳು ಮಾತ್ರ ತಂದು ಕೊಟ್ಟಿರುತ್ತಾರೆ ಅವರ ಸಹಿಗಳು ಇರಬಹುದು . ಮೂರು ಪ್ರತಿನಿಧಿಗಳು ಯಾರು ಯಾರು ಎಂದು ತೋರಿಸಲು ನ್ಯಾಯಾಲಯದಲ್ಲಿ ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ . ಸಾಕ್ಷಿ ನಿಪಿ-7 ನ್ನು ತೋರಿಸಿ ಇದೇ ಆ ದಾಖಲಾತಿ ಎಂದು ತೋರಿಸಿರುತ್ತಾರೆ . ಪ್ರತಿನಿಧಿ 1 ರಿಂದ 3 ಯಾರು ಎಂಬುವ ಬಗ್ಗೆ ಸಂಘದವರು ಠರಾವನ್ನು ಮಾಡಿರುತ್ತಾರೆ . ಅದು ಪ್ರತಿನಿಧಿಗಳನ್ನು ತೋರಿಸಿರುವ ದಾಖಲಾತಿ ಎಂದರೆ ಸಾಕ್ಷಿ ನೋಡಿ ಹೇಳಬೇಕು ಎಂದು ನುಡಿದಿರುತ್ತಾರೆ . ನಿಪಿ-7 ಪ್ರತಿನಿಧಿಗಳು ಅವರೇ ಎಂದು ಹೇಳುವ ದಾಖಲಾತಿ ಅಲ್ಲ ಎಂದರೆ ಸರಿಯಲ್ಲ.

9. ಬ್ಯಾಂಕನಿಂದ ಒಂದು ಸಾಲವನ್ನು ಪಡೆಯುವಾಗ ಸಾಲ ಒಪ್ಪಂದ ಅನುಚ್ಛೇದ ಎಂಬ ಪಾರ್ಮೆಟ್( ಲೋನ್ ಅಗ್ರಿಮೆಂಟ್ ) ಇರುತ್ತದೆ ಎಂದರೆ ಸರಿ . ಅದರಲ್ಲಿ ನಮ್ಮ ಸಹಕಾರಿ ಹೆಸರು ಬರೆದು ಯಾವ ಸಂಪಘಕ್ಕೆ ಸಾಲ ನೀಡುತ್ತಿದ್ದೇವೆ ಬರೆಯಬೇಕಾಗುತ್ತದೆ ಎಂದರೆ ಸರಿ . ಸಂಘದ ಜೊತೆಗೆ ನಮ್ಮ ಬ್ಯಾಂಕಿನ ಒಪ್ಪಂದ ಯಾವತ್ತು ಆಯಿತು ದಿನಾಂಕ ಬರೆಯಬೇಕಾಗುತ್ತದೆ ಎಂದರೆ ಸರಿ . ಯಾವ ಸಂಘದ ಜೊತೆಗೆ ಯಾವ ದಿನಾಂಕಂದು ಯಾವ ಠರಾವಿನ ಅನುಸಾರ ಸಾಲಕ್ಕಾಗಿ ಅರ್ಜಿ ಸಲ್ಲಿಸುವ ಸಂಘದ

ಸದಸ್ಯರುಗಳಿಗೆ ಸಾಲವನ್ನು ನೀಡುವುದಕ್ಕಾಗಿ ಎಷ್ಟು ಸಾಲವನ್ನು ನೀಡಿದ್ದೇವೆ ಎನ್ನುವ ಬಗ್ಗೆ ಅಕ್ಷರದಲ್ಲಿ ಹಾಗೂ ಅಂಕೆಯಲ್ಲಿ ನಮೂದು ಮಾಡಬೇಕಾಗುತ್ತದೆ ಎಂದರೆ ಸರಿ . ಆ ಪಾರ್ಮೆಟ್ ನಲ್ಲಿ ಕೆಳಗೆ ಈ ಒಪ್ಪಂದ ಪತ್ರವು ಈ ಕೆಳಕಂಡತೆ ಎಂದು ಎಷ್ಟು ಮೊತ್ತದ ಸಾಲ ಯಾವ ಖಾತೆಗೆ ಜಮಾ ಆಯಿತು ಎಂಬ ಬಗ್ಗೆ ನಮೂದು ಮಾಡಬೇಕಾಗುತ್ತದೆ ಎಂದರೆ ಸರಿ. ಯಾವ ಖಾತೆಗೆ ಜಮಾ ಆಗಿದೆ ಎಷ್ಟು ಹಣ ಜಮಾ ಆಗಿದೆ ನಿಖಾರವಾಗಿ ತುಂಬುತ್ತಾರೆ ಎಂದರೆ ಮಾಹಿತಿ ಇಲ್ಲ. ಅದೇ ಪಾರ್ಮೆಟ್ ನಲ್ಲಿ ಸಾಲ ಮರುಪಾವತಿ ಎನ್ನುವ ಕಾಲಂನಲ್ಲಿ ಸಾಲವನ್ನು ಸಮಾನ ಎಷ್ಟು ಮಾಸಿಕ ಅಥವಾ ತ್ರೈಮಾಸಿಕ ಎಂಬ ಬಗ್ಗೆ ನಮೂದಿಸಬೇಕಾಗುತ್ತದೆ ಎಂದರೆ ಸರಿ . ಈ ಪಾರ್ಮೆಟ್ ನ್ನು ತುಂಬಿದ ನಂತರ ಇಬ್ಬರು ಸಾಕ್ಷಿದಾರರ ಸಮ್ಮುಖದಲ್ಲಿ ಯಾವ ದಿನಾಂಕದಂದು ಸಹಿ ಮಾಡಲಾಯಿತು ನಮೂದಿಸಬೇಕಾಗುತ್ತದೆ ಆ ಬಗ್ಗೆ ಪಾರ್ಮೆಟ್ ಇದೆ ಎಂದರೆ ಸರಿ .ಈಗ ಮೇಲೆ ಕೇಳಿದ ಎಲ್ಲಾ ಸ್ಥಳಗಳು ನಿಪಿ –12 ರಲ್ಲಿ ಖಾಲಿ ಇವೆ ಎಂದರೆ ಸಾಕ್ಷಿ ಸಂಘದ ಹೆಸರು ಇದೆ ಎಂದು ನುಡಿದಿರುತ್ತಾರೆ. ಸಂಘದ ಹೆಸರು ಹೊರತು ಪಡಿಸಿ ಬೇರೆ ಎಲ್ಲಾ ಸ್ಥಳ ಖಾಲಿ ಇದೆ ಎಂದರೆ ಸರಿ . ಸಂಘ ಯಾವ ಊರಿನದ್ದು , ಸ್ಥಳದ್ದು ನಮೂದಾಗಿಲ್ಲ ಎಂದರೆ ಸರಿ . ನಿಪಿ–12 ರಲ್ಲಿ ಆರೋಪಿಯ ಸಹಿ ಇಲ್ಲ ಎಂದರೆ ಸರಿ . ಈ ಆರೊಪಿಗೆ ಸಾಲವನ್ನು ಸಂದಾಯ ಮಾಡಿದ್ದೇವೆ ಎಂದು ತೋರಿಸಲು ಯಾವ ದಾಖಲಾತಿ ಇಲ್ಲ ಎಂದರೆ ಸಾಕ್ಷಿ ನೆಪ್ಟ ಮಾಡಿದ ಬಗ್ಗೆ ಇದೆ ಎಂದು ನುಡಿದಿರುತ್ತಾರೆ . ನೆಪ್ಟ ಮಾಡಿದ ದಾಖಲಾತಿ ಈ ದಿನ ನ್ಯಾಯಾಲಯಕ್ಕೆ ತಂದಿದ್ದೇನೆ . ಆರೀತಿ ಆರೋಪಿಗೆ ನೆಪ್ಟ ಮಾಡಿದ ಯಾವುದೇ ದಾಖಲಾತಿ ಇಲ್ಲ ದಾಖಲಾತಿಯನ್ನು ನಾವು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ . ಈ ಪ್ರಕರಣದಲ್ಲಿ ನಮ್ಮ ಬ್ಯಾಂಕಿನಿಂದ ಎಷ್ಟು ಜನ ಪ್ರತಿನಿಧಿಸಿದ್ದಾರೆ ಮಾಹಿತಿ ಇಲ್ಲ . ತುಳಸಿದಾಸ ರಾಮ ಪಟಗಾರ, ನಂದೀಶ ಎಚ್ ನಾಯ್ಕ ಹಾಗೂ ಅಜಿತ ತಿಮ್ಮಾ ಆಗೇರ ಹಾಗೂ ಕುಮಟಾದ ಗಾವಡಿ ಒಟ್ಟೂ ಆರು ಜನ ಪ್ರಕರಣವನ್ನು ಪ್ರತಿನಿಧಿಸಿದ್ದಾರೆ ಎಂದರೆ ಇರಬಹುದು . ನಂದೀಶ , ಅಜಿತ ತಿಮ್ಮಣ್ಣ ಆಗೇರ ಹಾಗೂ ಗಾವಡಿ ಹಾಗೂ ತುಳಸಿದಾಸ ಪಟಗಾರ ಈಗ ಇವರು ಯಾರು ನಮ್ಮ ಶಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿಲ್ಲ. ನಮ್ಮ ಬ್ಯಾಂಕು ಗ್ರಾಹಕ ಸ್ನೇಹಿ ಬ್ಯಾಂಕ ಅಲ್ಲ , ಗ್ರಾಹಕರನ್ನು ವಂಚಿಸುವಂತಹ ಬ್ಯಾಂಕು

ಎಂದು ಗೊತ್ತಾದರಿಂದ ಅವರು ನಮ್ಮ ಬ್ಯಾಂಕನ್ನು ಬಿಟ್ಟು ಹೋಗಿದ್ದಾರೆ ಎಂದರೆ ಸರಿಯಲ್ಲ . ನೆಷ್ಟ ಮಾಡಿದ ದಾಖಲಾತಿ ಇದ್ದಿದ್ದರೆ ಆ ಆರು ಜನ ಪ್ರತಿನಿಧಿಸಿದ ಸಂದರ್ಭದಲ್ಲೇ ಅದನ್ನು ಹಾಜರು ಪಡಿಸುತ್ತಿದ್ದರು ಎಂದರೆ ಸಾಕ್ಷಿ ಅವರಿಗೆ ಮಾಹಿತಿ ಇಲ್ಲದೇ ಇರಬಹುದು ಎಂದು ನುಡಿದಿರುತ್ತಾರೆ . ಈ ಪ್ರಕರಣದಲ್ಲಿ ನಿಪಿ-7 ನ್ನು ಸಾಲದ ಅರ್ಜಿ ಎನ್ನುವ ದಾಖಲಾತಿ ಎನ್ನುವ ದಾಖಲಾತಿಯನ್ನು ಇನ್ನೊಂದು ಬಾರಿ ಹಾಜರು ಮಾಡುವಾಗ ತಿದ್ದುಪಡಿ ಮಾಡಿ ಹಾಜರು ಮಾಡಿದ್ದೇವೆ ಎಂದರೆ ಸರಿಯಲ್ಲ . ಅಕೌಂಟ್ ಸ್ಟೇಟಮೆಂಟ್ ನ್ನು ಎರಡೆರಡುದಾಖಲಾತಿಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ . ದೃಢಿಕರಣ ಮಾಡಿದ್ದೇವೆ ಎಂದು ನುಡಿದಿರುತ್ತಾರೆ. ನಿಪಿ-16 ಈ ಪ್ರಕರಣಕ್ಕಾಗಿ ನಾವು ಸೃಷ್ಟಿ ಮಾಡಿ ಹಾಜರು ಪಡಿಸಿದ ದಾಖಲಾತಿ ಎಂದರೆ ಸರಿಯಲ್ಲ. ಒಮ್ಮೆ ಹಾಜರು ಮಾಡಿದ ದಾಖಲಾತಿಯಲ್ಲಿ ಇನ್ನೊಮ್ಮೆ ಬರವಣಿಗೆ ಮಾಡಿ ಸೃಷ್ಟಮಾಡಿದ ದಾಖಲಾತಿಯನ್ನು ಹಾಜರು ಪಡಿಸಿದ್ದೇವೆ ಎಂದರೆ ಸರಿಯಲ್ಲ . ಎರಡು ರೀತಿಯ ಅಕೌಂಟ್ ಸ್ಟೇಟಮೆಂಟ್ಗಳನ್ನು ಹಾಜರು ಪಡಿಸಿ ನ್ಯಾಯಾಲಯದ ದಿಕ್ಕು ತಪ್ಪಿಸುವ ಪ್ರಯತ್ನ ಮಾಡಿದ್ದೇವೆ ಎಂದರೆ ಸರಿಯಲ್ಲ. ಈ ರೀತಿ ಮಾಡಿದ್ದರಿಂದ ನಾನು ಹಾಗೂ ನಮ್ಮ ಶಾಖೆಯವರು ಕಾನೂನು ಕ್ರಮಕ್ಕೆ ಅರ್ಹರು ಎಂದರೆ ಸಾಕ್ಷಿ ಟ್ರಾನಜೆಕ್ಷನ್ ಒಂದೇ ಆಗಿದೆ ಎಂದು ನುಡಿದಿರುತ್ತಾರೆ . ಎರಡು ದಾಖಲೆಗಳಲ್ಲಿರುವ ನಮೂದುಗಳು ಬೇರೆ ಬೇರೆ ಆಗಿವೆ ಎಂದರೆ ಸಾಕ್ಷಿ ಟ್ರಾನಜೆಕ್ಷನ್ ಒಂದೇ ರೀತಿ ಇದೆ ಎಂದು ನುಡಿದಿರುತ್ತಾರೆ. ಈ ಹಿಂದೆ ಈ ಪ್ರಕರಣದಲ್ಲಿ ಹಿಂದೆ ಪ್ರತಿನಿಧಿಸಿದ ಎಲ್ಲರೂ ಕೂಡ ನಿಪಿ -13 ನ್ನು ಗುರುತಿಸಿದ್ದೀರಿ ಎಂದರೆ ಸರಿ . ಅಜಿತ ಆಗೇರ ಪೆಬ್ರುವರಿ ತಿಂಗಳ ಅಂತ್ಯದಲ್ಲಿ ರಾಜೀನಾಮೆ ನೀಡಿ ಹೋಗಿದ್ದಾರೆ ಎಂದರೆ ನೆನಪಿಲ್ಲ. ನಮ್ಮ ಬ್ಯಾಂಕಿನವರು ಒತ್ತಾಯಪೂರ್ವಕವಾಗಿ ಸೃಷ್ಟಿಮಾಡಿದ ದಾಖಲಾತಿ ನಿಪಿ-16 ನ್ನು ಹಾಜರು ಪಡಿಸುವಂತೆ ಮಾಡಿದ್ದರಿಂದ ಅವರು ರಾಜೀನಾಮೆ ನೀಡಿ ಹೋಗಿದ್ದಾರೆ ಎಂದರೆ ಸರಿಯಲ್ಲ. ನಿಪಿ-16 ನ್ನು ನಾನು ಹಾಗೂ ಅಜಿತ ಆಗೇರ ಮಾತ್ರ ಗುರುತಿಸಿದ ದಾಖಲಾತಿ ಎಂದರೆ ಮಾಹಿತಿ ಇಲ್ಲ.

ಪಿಡಬ್ಲೂಃ 1

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ  ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.